

ವೆಲ್ಲೂರು ಕೋಟೆಯ ಹೊರನೋಟ

# ವೆಲ್ಲೂರು ವಿಪ್ಲವ

**1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮೊದಲೇ ವೆಲ್ಲೂರಿನಲ್ಲಿ ಸ್ವಾಭಿಮಾನದ ಕಿಡಿಗಳು ಮೊಳಗಿದ್ದವು. 1806ರ ಜುಲೈ 10ರ ಕಾರಿರುಳಲ್ಲಿ ನಡೆದ ದಂಗೆಯಲ್ಲಿ ನೂರಾರು ಜನ ಕೊಲೆಗೀಡಾದರು. ಸ್ವಾತಂತ್ರ್ಯ ಚಳವಳಿಯ ಆ ರಕ್ತಸಿಕ್ತ ಚರಿತ್ರೆಯನ್ನು ನೆನಪಿಸುವಂತೆ ವೆಲ್ಲೂರಿನ ಕೋಟೆ ಈಗಲೂ ಪಿಸುಗುಡುವ ಸ್ಮಾರಕದಂತೆ ಕಾಣಿಸುತ್ತದೆ.**

**■ ಎನ್. ಜಗನ್ನಾಥ ಪ್ರಕಾಶ್**

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಪಾರುಪತ್ಯದ ಉಜ್ವಲ ದಿನಗಳು. ಹೆಚ್ಚೂ ಕಡಿಮೆ ಇಡೀ ಭಾರತವನ್ನು ಕಂಪನಿ ತನ್ನ ಬಿಗಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿತ್ತು. ಅಲ್ಲಲ್ಲಿ ಆಗೀಗ ಪ್ರತಿರೋಧ ತೋರುತ್ತಿದ್ದ ಭಾರತೀಯರ ಸದೆಬಡಿಯಲು ಕಂಪನಿಯ ಸೇನೆ ಸದಾ ಸಿದ್ಧವಿತ್ತು. ಇಷ್ಟಾದರೂ ದೇಶದ ಉದ್ದಗಲಗಳಲ್ಲಿ ಆಗಾಗ ಸ್ವಾತಂತ್ರ್ಯದ ಧ್ವನಿಗಳು ರೂಪುಗೊಳ್ಳುತ್ತಲೇ ಇದ್ದವು. 1857ರ ಸಿಪಾಯಿದಂಗೆ ದೊಡ್ಡ ಪ್ರಮಾಣದಲ್ಲೇ ನಡೆದರೂ ಬ್ರಿಟಿಷರ ದೈತ್ಯಸೇನೆಯ ವಿರುದ್ಧ ಧನಿ ಎತ್ತಲಾಗಲಿಲ್ಲ. ಆಗಿನ ಕಾಲಘಟ್ಟದಲ್ಲಿ ಭಾರತೀಯರಲ್ಲಿದ್ದ ಒಗ್ಗಟ್ಟಿನ ಕೊರತೆಯನ್ನು ಸದುಪಯೋಗ ಮಾಡಿಕೊಂಡಿದ್ದ ಬ್ರಿಟಿಷರು, ದೇಶದುದ್ದಕ್ಕೂ ಅನೇಕ ಹೋರಾಟಗಳನ್ನು ದಮನಗೊಳಿಸಿದ್ದರು, ದಂಗೆಗಳನ್ನು ಹತ್ತಿಕ್ಕಿದ್ದರು. ಅಂತಹ ದಂಗೆಗಳಲ್ಲಿ ವೆಲ್ಲೂರು ವಿಪ್ಲವವೂ ಒಂದು.

ಪ್ರಸ್ತುತ ತಮಿಳುನಾಡಿನಲ್ಲಿರುವ ವೆಲ್ಲೂರು ಪಟ್ಟಣವನ್ನು ಸ್ಥಾಪಿಸಿದ್ದು ವಿಜಯನಗರ ಅರಸರು. ಅಲ್ಲೊಂದು ಸದೃಢವಾದ ಕೋಟೆಯನ್ನು ವಿಜಯನಗರದ ದೊರೆಗಳು ಕಟ್ಟಿದ್ದು 1566ರ ಸುಮಾರಿಗೆ.

ದಕ್ಷಿಣ ಭಾರತದಲ್ಲಿ ಬ್ರಿಟಿಷರ ವಿರುದ್ಧ ಪ್ರತಿರೋಧ ತೋರಿದ ಟಿಪ್ಪು ಸುಲ್ತಾನನ್ನು 1799ರ ಶ್ರೀರಂಗಪಟ್ಟಣ ಯುದ್ಧದಲ್ಲಿ ಸೋಲಿಸಲಾಗಿತ್ತು. ಆ ಸಂಘರ್ಷದಲ್ಲಿ ಸೆರೆಸಿಕ್ಕ ಯುದ್ಧ ಕೈದಿಗಳು ಹಾಗೂ ಟಿಪ್ಪು ಸುಲ್ತಾನ್ ಕುಟುಂಬ ಸದಸ್ಯರನ್ನು ವೆಲ್ಲೂರು ಕೋಟೆಯಲ್ಲಿಡಲಾಗಿತ್ತು.

ಆಯಕಟ್ಟಿನ ಜಾಗವಾಗಿದ್ದ ವೆಲ್ಲೂರು ಕೋಟೆ ವಿಶಾಲವಾಗಿದ್ದು, ಅಲ್ಲಿ ಬ್ರಿಟಿಷ್ ಸೇನೆಯ ಕೆಲ ತುಕಡಿಗಳೂ ಇದ್ದವು. ಆ ತುಕಡಿಗಳಲ್ಲಿ ಭಾರತೀಯ ಸಿಪಾಯಿಗಳೂ



